ದಿನಾಂಕ 31.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ- ಅರ್ಜಿದಾರರ ಪರ ವಕೀಲರಾದ ಶ್ರೀಮತಿ ಬಿ.ಯು.ಪಿ ರವರಿಂದಃ-**

ನಾನು ಈ ಅರ್ಜಿಯಲ್ಲಿ ಅರ್ಜಿದಾರಳಾಗಿದ್ದು, ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರಕ್ಕೆ ಪೂರಕವಾಗಿ ಸಾಕ್ಷ್ಯ ಪ್ರಮಾಣಪತ್ರವನ್ನು ಈ ದಿನ ನ್ಯಾಯಾಲಯದಲ್ಲಿ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿಗಳು ನನ್ನ ಸಹಿಗಳು ಆಗಿವೆ.

ಪ್ರಥಮ ವರ್ತಮಾನ ವರದಿ, ದೂರು, ಸ್ವತ್ತು ಪಟ್ಟಿಗಳನ್ನು, ಸ್ಥಳ ಮಹಜರ್, ಅಪಘಾತದ ಸ್ಥಳ ಸ್ಕೆಚ್, ದೋಷಾರೋಪಣಾ ಪಟ್ಟಿ, ಸೂಚನಾ ಪತ್ರದ ದೃಡೀಕೃತ ನಕಲುಗಳನ್ನು ಹಾಜರುಪಡಿಸುತ್ತಿದ್ದು, ಅವುಗಳನ್ನು ನಿ.ಪಿ 1 ರಿಂದ 8 ಎಂದು ಗುರುತಿಸಲಾಯಿತು. ಆಧಾರ ಕಾರ್ಡ್ ಮತ್ತು ಬ್ಯಾಂಕ್ ಪಾಸ್ ಬುಕ್, ವಾಹನ ನೋಂದಣಿ ಪ್ರಮಾಣಪತ್ರ, ಚಾಲನಾ ಪರವಾನಗಿಯ ನೋಟರೀ ದೃಡೀಕೃತ ನಕಲನ್ನು ಹಾಜರುಜಪಡಿಸಿದ್ದು, ಅವುಗಳನ್ನು ನಿ.ಪಿ 9 ರಿಂದ 12 ಎಂದು (ಮೂಲ ದಾಖಲೆಗಳೊಂದಿಗೆ ತಾಳೆ ಮಾಡಿ, ಹಿಂತಿರುಗಿಸಲಾಯಿತು) ಗುರುತಿಸಲಾಯಿತು. ವಿಮಾ ಪಾಲಿಸಿಯನ್ನು ನಿ.ಪಿ 13 ಎಂದು ಗುರುತಿಸಲಾಯಿತು.

ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.